# ಪದ್ಯ ಪೂರಕ ಅಧ್ಯಯನ

## 4. ಉರಿದ ಬದುಕು – ಶಾಂತರಸ

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಅರ್ಧ ಬಾಗಿಲು ತೆಗೆದು ಅನ್ನವ್ವ ತಿಪ್ಪಣ್ಣನಿಗೆ ಏನೆಂದು ಹೇಳಿದಳು?
**ಉತ್ತರ :** ಅರ್ಧ ಬಾಗಿಲು ತೆಗೆದು ಅನ್ನವ್ವ ತಿಪ್ಪಣ್ಣನಿಗೆ "ಬೇಡ ಅಣ್ಣ ಕಾಲಿಗೆ ಬೀಳುತ್ತೇನೆ; ಒಳಗೆ ಬರಬೇಡ ನಮ್ಮನ್ನೆಲ್ಲ ಸಾವಿನ ಬಾಯಿಯಲ್ಲಿ ತುರಕಬೇಡ" ಎಂದು ಹೇಳಿದಳು.

2. ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು ಯಾರು?
**ಉತ್ತರ :** ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು 'ಶಂಕ್ರಣ್ಣ'

3. ದುರ್ಗಪ್ಪ ಯಾರು?
**ಉತ್ತರ :** ದುರ್ಗಪ್ಪ ಭಜನೆ, ತತ್ವಪದ ಆಡುವವನು ಹಾಗೂ ತಿಪ್ಪಣ್ಣ ಮೊದಲಾದ ಹೋರಾಟಗಾರರಿಗೆ ಆಶ್ರಯ ನೀಡಿದವನು.

4. ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು?
**ಉತ್ತರ :** ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ "ಕುಡಿ ತಮ್ಮ ಮೊದಲು ಜೀವ ಬದುಕಲಿ. ಜೀವಕ್ಕೆ ಯಾವ ಕುಲನೂ ಇಲ್ಲ. ಗಾಳಿಗೆ ಕುಲ ಇದೀಯಾ ತಮ್ಮ? ನೀರಿಗೆ ಕುಲ ಇದೀಯಾ? ನೆಲಕ್ಕೆ ಕುಲ ಇದೀಯಾ? ಇದೆಲ್ಲ ನಾವು ಮಾಡಿಕೊಂಡಿದ್ದು" ಎಂಬ ನೀತಿಯ ಮಾತುಗಳಾಡಿದರು.

5. ದುರ್ಗಪ್ಪನ ಯಾವ ಮಾತುಗಳು ಹೋರಾಟಗಾರರ ಕೈಕಾಲು ಉಕ್ಕಿನಂಗೆ ಆಗುವಂತೆ ಮಾಡುತ್ತಿದ್ದವು?
**ಉತ್ತರ :** "ಗೆಲುವು ನಮಗೆ, ಬದುಕಿದ್ದರೇ ಸ್ವತಂತ್ರ ನೋಡೋಣ. ಸತ್ತರೆ ದೇಶಕ್ಕಾಗಿ ಸತ್ತ ಎಂದು ಹೇಳುತ್ತಾರೆ. ಇಂತ ಸಾವು ಯಾರಿಗುಂಟು ಯಾರಿಗಿಲ್ಲ, ಅದು ಪುಣ್ಯದ ಕೆಲಸ. ನಮ್ಮ ಮುಂದಿನವರಾದರೂ ಸ್ವತಂತ್ರ ನೋಡ್ತಾರಲ್ಲ" ಎಂಬ ದುರ್ಗಪ್ಪನ ಈ ಮಾತುಗಳು ಹೋರಾಟಗಾರರ ಕೈಕಾಲು ಉಕ್ಕಿನಂಗೆ ಆಗುವಂತೆ ಮಾಡುತ್ತಿದ್ದವು.